ಪದ್ಮಜಾ ಸುಂದರೇಶ್, ಮೈಸೂರು
*ಕವಿಗಳು ತಮ್ಮ ಕವನಗಳನ್ನು ವಾಚಿಸುವಾಗ ಪ್ರತಿಯೊಂದು ಸಾಲನ್ನೂ ಎರಡೆರಡು ಸಾರಿ ಹೇಳುವರಲ್ಲಾ, ಏಕೆ?*



ಪಂಚ್ ಸಿಗಲೆಂದು; ಕೆಲವೊಮ್ಮೆ ಕವನಕ್ಕೆ ಸಿಗುತ್ತದೆ, ಕೆಲವೊಮ್ಮೆ ಕವಿಗೆ!

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು
*ಅಟ್ಟಕ್ಕೆ ಹಾರಲಾಗದಿದ್ದರೂ ಬೆಟ್ಟಕ್ಕೆ ಹಾರಲು ಪ್ರಯತ್ನಿಸುತ್ತಾರಲ್ಲಾ...?*
ಹೇಳಕ್ಕಾಗಲ್ಲ; ಕೆಲವೊಮ್ಮೆ ರಾಜ್ಯಪ್ರಶಸ್ತಿಗೂ ಅರ್ಹರಲ್ಲದವರಿಗೆ ಜ್ಞಾನಪೀಠ ದಕ್ಕಿಬಿಡಬಹುದು!


ಡಿ.ಎಲ್. ನಾಗರಾಜ್, ಚನ್ನಗಿರಿ
*ಒಬ್ಬ ವ್ಯಕ್ತಿಯ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳದೆ ಟೀಕೆ ಮಾಡುವವರನ್ನು ಏನಂತೀರಿ ಗುರೂಜಿ?*
ಬ್ರೇಕಿಂಗ್ ನ್ಯೂಸ್ ವರದಿಗಾರ!

ಜಾಕೋಬ್ ಡಿಸೋಜ, ಕುರುವಳ್ಳಿ
*ಬಾಯಲ್ಲಿ ಬೆಣ್ಣೆ, ಬಗಲಲ್ಲಿ ದೊಣ್ಣೆ ಯಾಕೆ?*
ಸಮರಸಕ್ಕೊಂದು, ಸಮರಕ್ಕೊಂದು!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಸಾವಿಗೆ ಸಾಸಿವೆ ಕಾಳಿನಷ್ಟಾದರೂ ಕರುಣೆ ಇದ್ದಿದ್ದರೆ...?*
ಜನ– ಸುನಾಮಿಯಾಗಿ ಇಡೀ ಭೂಮಿಗೇ ಹೌಸ್ ಫುಲ್ ಬೋರ್ಡ್ ಹಾಕಬೇಕಾಗುತ್ತಿತ್ತು!

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು
*ಅತ್ತೆಗೂ, ಸೊಸೆಗೂ ಕಾಲವೇ ಬರದಿದ್ದರೆ ಹೇಗಿರುತ್ತದೆ?*
ಪುರುಷಪ್ರಧಾನ ಸಮಾಜಕ್ಕೆ ಧಿಕ್ಕಾರ ಎಂಬ ಸ್ತ್ರೀಸಂಘಗಳ ಹುಯಿಲು ಹೆಚ್ಚುತ್ತದೆ!

ಬಸವಣ್ಣ ಹೊನಖಾಂಡೆ, ಅಥಣಿ
*ನಿಮ್ಮ ಮನೆಯಲ್ಲಿ ತಟ್ಟೆಗಳು ಹಾರಾಡುತ್ತವೆಯೇ?*



ನೋ ಛಾನ್ಸ್! ನಾವು ಬಾಳೆ ಎಲೆ ಬಳಸುತ್ತೇವೆ!

■ ರಾಮ್

ವಿ. ಹಮೀದ್, ವಿಟ್ಲ
*ಕೋಪ ಬಂದರೆ ನಾಯಿ ಕಚ್ಚುತ್ತೆ; ಹುಡುಗಿ...?*
ಅದೇ ನಾಯಿಯನ್ನು ಛೂ ಬಿಡುತ್ತಾಳೆ!

ವಿದ್ಯಾನಾಗ್, ಬೆಂಗಳೂರು
*ಗಂಡಿಗೂ, ಗುಂಡಿಗೂ ಏನು ವ್ಯತ್ಯಾಸ?*
ಗುಂಡಿಗೆ ಅವಶ್ಯ ನೀರು, ಗಂಡಿಗೆ ಅವಶ್ಯ ನೀರೆ!

ರಾಂಕೊ, ತೀರ್ಥಹಳ್ಳಿ
ಹೆಂಡತಿ ಚಿನ್ನ, ಬಂಗಾರವಾದ್ರೆ, ನಾದಿನಿ...?
ಮಹದಾಶ್ಚರ್ಯ! ಗಂಡ ಚಿನ್ನ, ರನ್ನ ಆದರೆ ಮೈದುನ...? ಎಂದು ಇತ್ತೀಚೆಗೆ ಕೇಳಿದರಂತೆ ಪತ್ನಿ!

ಪ್ರಹ್ಲಾದರಾಜು ಬುರ್ಲಿ, ದಾವಣಗೆರೆ
*ಸ್ತ್ರೀ ಎನ್ನುವುದನ್ನು ಕೆಲವರು ಇಸ್ತ್ರೀ ಎನ್ನುವರಲ್ಲಾ?*
ಅವರ ಮುದುಡಿದ ಮನ, ಮನೆ ನೇರಗೊಳಿಸಿರುವಳಂತೆ!

ಆ.ರಾ. ಮಂಜುನಾಥ, ಗೆದರೆ
*ಹುಡುಗಿಯರ ಪ್ರೀತಿಗೂ, ಆಂಟಿಯರ ಪ್ರೀತಿಗೂ ಇರುವ ವ್ಯತ್ಯಾಸವೇನು?*
ಹುಡುಗಿಯರದು ಮಾವಿನಕಾಯಿಯ ರುಚಿ, ಆಂಟಿಯರದು ಮಾವಿನ ಹಣ್ಣಿನ ರುಚಿ!

ಸುಪ್ರೀತ ಎಸ್. ಬೆಳವಾಡಿ
*ದಡ್ಡರ ತಲೆಯಲ್ಲಿ ಕಂಪ್ಯೂಟರ್ ಇಟ್ರೆ ವರ್ಕೌಟ್ ಆಗಬಹುದಾ ಸಾರ್?*
ಊಹೂಂ; ಹ್ಯಾಂಗ್ ಆಗತ್ತೆ?

ಮಹಾವೀರ ಕಾಸರ, ಶಿವಮೊಗ್ಗ
*ಅವಳೊಂದು ಒಗಟು; ಬಿಡಿಸುವುದು ಹೇಗೆ?*
ಶಾಪಿಂಗ್ ಎನ್ನಿ, ಕ್ಲೂ ಸಿಗುತ್ತದೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ನಿಮ್ಮ ಉತ್ತರದಲ್ಲಿರುವ ತಿಳಿಹಾಸ್ಯವನ್ನು ಸಹ ಗಂಭೀರವಾಗಿ ಸ್ವೀಕರಿಸುವವರು ಇರುವರಲ್ಲಾ ರಾಮ್‌ಜಿ...?*
ಬಿಡಿ ಸಾರ್, ಕತ್ತೇಗೇನ್ ಗೊತ್ತು ಕಸ್ತೂರಿ ಸುಗಂಧ!

ಎನ್.ಎಸ್. ಆನಂದ್, ಬೆಂಗಳೂರು
*ಸ್ತ್ರೀಯರು ಅಲಂಕಾರ ಮಾಡಿಕೊಳ್ಳಲು ಬಳಸುವ ಕನ್ನಡಿ ತಯಾರಿಕೆ ನಿಂತುಹೋದರೆ?*
ಹೊಳೆಯುವ ಬೋಡು ತಲೆಯವರ ಮುಂದೆ ನಿಂತು ನಿನ್ನ ಬೋಡು ಮುಂದಲೆಯಲ್ಲಿ ಕಂಡೆ ನನ್ನ ರೂಪ ಎನ್ನುವರಂತೆ!

ಪಿ.ಎನ್. ಶ್ರೀವತ್ಸ, ಬೆಂಗಳೂರು
*ಸಂಕ್ರಾಂತಿಯಂದು ಬಾಗಿಲಿಗೆ ಹಾಕಿದ ಮಾವಿನ ತೋರಣ ಯುಗಾದಿಗ್ಯಾಕೆ?*
ಇನ್ನೂ ಒಣಗಿಲ್ಲವಂತೆ; ಪ್ಲಾಸ್ಟಿಕ್‌ದಲ್ಲವೇ!

## ಬಹುಮಾನಿತ ಪ್ರಶ್ನೆ

ವೆಂಕಟೇಶ ಎಂ. ಪೈ, ಹೊನ್ನಾವರ
*ವೈದ್ಯರು ಬಿಳಿ ಅಂಗಿಯನ್ನು, ವಕೀಲರು ಕಪ್ಪು ಅಂಗಿಯನ್ನು ಏಕೆ ಧರಿಸುತ್ತಾರೆ?*
ಕೇಸ್ ಹೆಚ್ಚು ಕಡಿಮೆಯಾದರೆ ಕ್ರಮವಾಗಿ ಶವಕ್ಕೆ, ಅಪರಾಧಿಯ ಮುಖಕ್ಕೆ ಹೊದೆಸಲು!

ಅಭಿಷೇಕ್ ಆರ್. ರೆಡ್ಡಿ, ಗೌರಿಬಿದನೂರು
*ಇಲ್ಲಿನ ದೇವರಿಗೆ ಸುಪ್ರಭಾತ ಹಾಡಿ ಎಬ್ಬಿಸುವುದೇನೋ ಸರಿ; ಆದರೆ ಇತರ ದೇಶಗಳಿಗೂ ದೇವನು ನಿದ್ರಿಸಲು ಹೋಗುತ್ತಾನಲ್ಲಾ...?*
ಚಿಂತೆ ಬೇಡ. ಗಂಟೆಗೊಮ್ಮೆ ಚರ್ಚ್ ಗಡಿಯಾರ, ದಿನಕ್ಕೈದು ಬಾರಿ ಅಲ್ಲಾ ಕೂಗುವಾಗ ದೇವ ನಿದ್ರಿಸಲು ಸಾಧ್ಯವೇ ಇಲ್ಲ!

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್
*ಇತ್ತೀಚಿನ ದಿನಗಳಲ್ಲಿ ವಕೀಲರು ದಾಂದಲೆ ನಡೆಸಿದಾಗ ಪೊಲೀಸರು ಮೌನವಾಗಿದ್ದುದೇಕೆ?*
ಹಿಡಿದರೆ ಮ್ಯಾನ್ ಹ್ಯಾಂಡ್ಲಿಂಗ್, ಹೊಡೆದರೆ ಅಟೆಂಪ್ಟ್ ಟು ಮರ್ಡರ್ ಕೇಸ್ ಹಾಕುವರೆಂಬ ಭಯವಂತೆ!

ಗೀತಾ ಬರ್ಲ, ಬೆಂಗಳೂರು
*ಇತರರಿಗೆ ಹಂಚಿದಷ್ಟೂ ಹೆಚ್ಚಾಗುವ ವಸ್ತು ಯಾವುದು?*




ಗಾಸಿಪ್!

ಮೇಟಿಕೊಟ್ರಪ್ಪ, ಬಸರಕೋಡು
*ಪ್ರಶ್ನೆಗಳೇ ಇಲ್ಲದ ಜಗತ್ತು ನಿರ್ಮಾಣವಾದರೆ?*
ಸಾಧ್ಯವೇ ಇಲ್ಲ; ಜಗದ ಅರ್ಥವಾಗದ ಏಕೈಕ ಪ್ರಶ್ನೆ ಹೆಣ್ಣು; ಅವಳಿಲ್ಲದೆ ಜಗವಿಲ್ಲ!

ಡಿ.ಎಲ್. ಸುರೇಶ್, ಚನ್ನಗಿರಿ
*ಸಾಹಿತ್ಯದ ತಳಹದಿ ಏನು?*
ನಿರಂತರ ಅಧ್ಯಯನ! ಅದು ಈಗ ದುರ್ಲಭವಾಗಿದೆ ಬಿಡಿ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಕಲೆಗಾರನಿಗೂ, ಕೊಲೆಗಾರನಿಗೂ ಇರುವ ವ್ಯತ್ಯಾಸವೇನು ಶಿವಾ?*
ಇವನದು ಉಳಿಪೆಟ್ಟು, ಅವನದು ಉಳಿಯದ ಪೆಟ್ಟು!